234(407) ಶ್ರೀ ಶಿವರಾಮು ಬಿ ಗಂಡಸಿ

ಮಾನ್ಯ ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಮೀನುಗಾರಿಕೆ ಇಲಾಖೆಯಲ್ಲಿ 1990 ರಿಂದ ಚಾಲ್ತಿಯಲ್ಲಿರವ ವ್ಯಂದ ಮತ್ತು ನೇಮಕಾತಿ ನಿಯಮಾವಳಿಗಳ ಪ್ರಕಾಯ ಎಷ್ಟು ಜಂಟಿ ನಿರ್ದೇಶಕರ ಮಂಜೂರಾದ ಹುದ್ದೆಗಳು ಇವೆ? ತಾತ್ಕಾಲಿಕ ಹುದ್ದೆಗಳಲ್ಲಿ ಎಷ್ಟು ಹುದ್ದೆಗಳು 1990 ರಿಂದ ಇಲ್ಲಿಯವರೆವಿಗೆ ಕೈ ಬಿಡಲಾಗಿದೆ ಮತ್ತು ಎಂದಿನಿಂದ ಕೈ ಬಿಡಲಾಗಿದೆ?

ಆ) ಜಂಟಿ ನಿರ್ದೇಶಕರ ತಾತ್ಕಾಲಿಕ ಹುದೆಗಳಿಗೆ ಸರ್ಕಾರದ ಮಟ್ಟದಲ್ಲಿ ಜೈಬಿಡಲಾದ ಹುದ್ದೆಗಳಲ್ಲಿ ಹೆಚ್ಚವರಿಯಾಗಿ ಜಂಟಿ ನಿರ್ದೇಶಕರ ಹುದ್ದೆಗಳಿಗೆ ಬಡ್ತಿ ನೀಡಲಾಗಿದೆಯೇ? ಈ ರೀತಿ ಇದ್ದಲ್ಲಿ ಬಡ್ತಿ ನಿಡಿರುವ ಜಂಟಿ ನಿರ್ದೇಶಕರುಗಳ ಹುದ್ದೆಯ ಸಂಖ್ಯೆಗಳು ಎಷ್ಟು?

ಇ) ಮೀನುಗಾರಿಕೆ ಇಲಾಖೆಯಲ್ಲಿ 2002 ರಿಮದ ಇಲ್ಲಿಯವರೆವಿಗೆ ಜಂಟಿ ನಿರ್ದೇಶಕರ ಹುದ್ದೆಗಳಿಗೆ ಬಡ್ತಿ ನೀಡಿದಾಗ ಇಲಾಖೆಯಲ್ಲಿ ಅಧಿಕೃತವಾಗಿ ಇರುವ ಹುದ್ದೆಗಳಿಗಿಂತ ಹೆಚ್ಚಾಗಿ ಬಡ್ತಿ ನೀಡಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಈ) ಮೀನುಗಾರಿಕೆ ಇಲಾಖೆಯಲ್ಲಿ ಬಡ್ತಿ ನೀಡುವಾಗ ಅಧಿಕೃತವಾಗಿ ಮಂಜೂರಾಗದ ಜಂಟಿ ನಿರ್ಧೇಶಖರ ಹುದ್ದೆಗಳಿಗೆ ಹೆಚ್ಚುವರಿಯಾಗಿ ಆರ್ಥಿಕ ಇಲಾಖೆಯಿಂದ ಸಹಮತ ಪಡೆಯಲಾಗಿದೆಯೇ?

ಉ) 2002 ರಿಮದ ಇಲ್ಲಿಯವರೆಗೆ ನೀಡಿರುವ ಮೀನುಗಾರಿಕಾ ಜಂಟಿ ನಿರ್ಧೇಶಕರ ಬಡ್ತಿ ಪ್ರಕ್ತಿಯೆಯಲ್ಲಿ ಎಸಗಿರುವ ಲೋಪಗಳನ್ನು ಸರಿಪಡಿಸಲು ಯಾವ ಕ್ರಮವನ್ನು ಕೈಗೊಂಡಿದೆ?

ಶ್ರೀ ಬಿ ನಾಗರಾಜ ಶೆಟ್ಟಿ

ಅ) ಮೀನುಗಾರಿಕೆ ಇಲಾಖೆಯಲ್ಲಿ 1900 ರ ವೃಂದ ಮತ್ತು ನೇಮಕಾತಿ ನಿಯಮಾವಳಿಗಳ ಪ್ರಕಾರ ಒಟ್ಟು 06 ಜಂಟಿ ನಿರ್ದೇಶಕರ ಮಂಜೂರಾದ ಹುದ್ದೆಗಳಿವೆ ಅದರಲ್ಲಿ 01 ಖಾಯಂ ಹುದ್ದೆ ಮತ್ತು 06 ತಾತ್ಕಾಲಿಕ ಹುದ್ದೆಗಳು 1990 ರಿಂದ ಇಲ್ಲಿಯವರೆಗೆ ಇವುಗಳಲ್ಲಿ ಕೆಳಕಂಡ 02 ತಾತ್ಕಾಲಿಕ ಹುದ್ದೆಗಳನ್ನು ಕೈ ಬಿಡಲಾಗಿದೆ

1) 1991 ರಲ್ಲಿ ಕರ್ನಾಟಕ ಒಳನಾಡು ಮೀನುಗಾರಿಕಡೆ ಅಭಿವೃದ್ಧಿ ನಿಗಮವನ್ನು ಮುಚ್ಚಲ್ಪಟ್ಟ ಕಾರಣ ಈ ಸಂಸ್ಥೆಯ ವ್ಯಸ್ಥಾಪಕ ನಿರ್ದೇಶಕರ ಹುದ್ದೆಯನ್ನು ಕೂ ಬಿಡಲಾಗಿದೆ

(2) 1996 ರಲ್ಲಿ ಯೋಜನಾ ನಿರ್ಧೇಶಕರು ಇಂಡೋ–ಡ್ಯಾನಿಷ್ ಫಿಷರಿಸ್ ಪ್ರಾಜೆಕ್ಟ್ ತದಡಿ ಈ ಯೋಜನೆಯು ಪೂರ್ಣಗೊಂಡ ಕಾರಣ ಈ ಹುದ್ದೆಯನ್ನು ಕೈ ಬಿಡಲಾಗಿದೆ

ಆ) ಸಕಾರದ ಮಟ್ಟದಲ್ಲಿ ಕೈ ಬಿಡಲಾದ ಹುದ್ದೆಗಳಲ್ಲಿ ಹೆಚ್ಚುವರಿಯಾಗಿ ಮೀನುಗಾರಿಕೆ ಜಂಟಿ ನಿರ್ಧೇಶಕರ ಹುದ್ದೆಗಳಿಗೆ ಬಡ್ತಿ ನೀಡಿರುವುದಿಲ್ಲ

2002 ರಲ್ಲಿ ಮೀನುಗಾರಿಕೆ ಇಲಾಖೆಯಲ್ಲಿ ಖಾಲಿ ಇದ್ದ ಕೆಳಕಂಡ ಜಂಟಿ ನಿರ್ಧೇಶಕರ ವೃಂದದ ಹುದ್ದೆಗಳನ್ನು ಮುಭಡ್ತಿ ಮುಖಾಂತರ ಭರ್ತಿ ಮಾಡಲಾಗಿದೆ

1) ಮೀನುಗಾರಿಕೆ ಜಂಟಿ ನಿರ್ದೇಶಕರು (ಒಳನಾಡು)

2) ಮೀನುಗಾರಿಕೆ ಜಂಟಿ ನಿರ್ದೇಶಕರು (ಕರಾವಳಿ)

3) ಯೋಜನಾ ಸಮನ್ವಯಾಧಿಕಾರಿ, ಮಲ್ಪೆ ಮತ್ತು ಹೊನ್ನಾವರ ಮೀನುಗಾರಿಕೆ ಬಂದರುಗಳ ಯೋಜನೆ ಮಲ್ಪೆ

4) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮ ಮಂಗಳೂರು

5) ಮುಂದುವರೆದು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಸಹಕಾರಿ ಮೀನುಗಾರಿಕೆ ಮಹಾಮಂಡಳಿ (ನಿ), ಮೈಸೂರು ಈ ಹುದ್ದೆಯು ಎಕ್ಸ್-ಕ್ಯಾಡರ್ ಹುದ್ದೆಯಾಗಿದ್ದು, ಸದರಿ ಹುದ್ದೆಯನ್ನು ಮೀನುಗಾರಿಕೆ ಇಲಾಖೆಯಿಂದ ಎರವಲು ಸೇವೆಯ ಮೇರೆಗೆ ಮೀನುಗಾರಿಕೆ ಜಂಟಿ ನಿರ್ದೇಶಕರಿಂದಲೇ ಭರ್ತಿ ಮಾಡಲು ಅವಕಾಶವಿದ್ದುದರಿಂದ ಈ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಕರ್ನಾಟಕ ಆಡಳಿತ ಸೇವಾ ಅಧಿಕಾರಿಯ ಸೇವೆಯನ್ನು ಅದರ ಮಾತೃ ಇಲಾಖೆಗೆ ಹಿಂದಿರುಗಿಸಿ ಬಡ್ತಿ ಮುಖಾಂತರ ಒಬ್ಬ ಮೀನುಗಾರಿಕೆ ಜಂಟಿ ನಿರ್ದೇಶಕರ ವೃಂದದ ಅಧಿಕಾರಿಗೆ ಸ್ಥಳ ನಿಯುಕ್ತಿ ನೀಡಲಾಗಿದೆ

ಇ) ಹೌದು, ಬಂದಿದೆ ಎಕ್ಸ್-ಕ್ಯಾಡರ್ ಹುದ್ದೆಗಳಾದ ಕರ್ನಾಟಕ ಸಹಕಾರಿ ಮೀನುಗಾರಿಕೆ ಮಹಾಮಂಡಳಿ (ನಿ) ಮೈಸೂರು ಇದರ ವ್ಯವಸ್ಥಾಪಕ ನಿರ್ದೇಶಕರ ಹುದ್ದೆಗೆ ಮೀನುಗಾರಿಕೆ ಜಂಟಿ ನಿರ್ದೇಶಕರ ವೃಂದದ ಅಧಿಕಾರಿಯನ್ನೇ ನಿಯೋಜನೆ ಮೇರೆಗೆ ನೇಮಿಸಲು ಸದರಿ ಮಹಾಮಂಡಳಿಘೆ ಮಂಜೂರಾದ ವೃಂದ ಬಲದಲ್ಲಿ ಅವಕಾಶವಿದ್ದುದರಿಂದ ಅದರಂತೆಯೆ ಕ್ರಮ ಕೈಗೊಳ್ಳಲಾಗಿದೆ ಹಾಗೂ ಕರ್ನಾಟಕ ಜೀವ ವೈವಿದ್ಯ ಮಂಡಳಿಯಲ್ಲಿ ಕಾರ್ಯನಿರ್ವಹಾಣಾದಿಕಾರಿ (ಮೀನುಗಾರಿಕೆ) ಹುದ್ದೆಯನ್ನು ಮೀನುಗಾರಿಕೆ ಜಂಟಿ ನಿರ್ದೇಶಕರ ವೃಂದದ ಅದಿಕಾರಿಯಿಂದಲೇ ನಿಯೋಜನೆ ಮೇರೆಗೆ ಭರ್ತಿ ಮಡಲು ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯಲ್ಲಿ ಸಕಾರದ ಆಧೇಶವನ್ನು ಹೊರಪಡಿಸಿದ್ದು ಪ್ರಯುಕ್ತ ಹಾಗೂ ಈ ಹುದ್ದೆಯೂ ಕೂಡ ಎಕ್ಸ್-ಕ್ಯಾಡರ್ ಹುದ್ದೆ ಆಗಿರುವುದರಿಮದ ಈ ಹುದ್ದೆಯಲ್ಲಿ ಒಬ್ಬ ಮೀನುಗಾರಿಕೆ ಜಂಟಿ ನಿರ್ದೇಶಕರನ್ನು ನಿಯೋಜನೆ ಮೇರೆಗೆ ಸ್ಥಳನಿಯುಕ್ತಿಗೊಳಿಸಲಾಗಿದೆ

ಈ) ಮೇಲ್ಕಾಣಿಸಿದ ಬಡ್ತಿಗಳಿಂದ ಅಮದಿನ ಮಾನ್ಯ ಮುಖ್ಯಮಂತ್ರಿಗಳ (ಆರ್ದಿಕ ಸಚಿವರ) ಅನುಮೋದನೆಯನ್ನು ಪಡೆಯಲಾಗಿದೆ

ಊ) ಮೀನುಗಾರಿಕೆ ಇಲಾಖೆಯ ವ್ಯಂದ ಮತ್ತು ನೇಮಕಾತಿ ನಿಯಮಗಳನ್ನು 1990 ರಲ್ಲಿ ರೂಪಿಸಿದ್ದು ಸದರಿ ನಿಯಮಗಳನ್ನು ಪರಿಷ್ಕರಿಸುವ ಪ್ರಸ್ತಾವವು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ ಆ ಸಮಯದಲ್ಲಿ ಎಲ್ಲಾ ಲೋಪದೋಷಗಳನ್ನು ಸರಿಪಡಿಸಲು ಕ್ರಮ ಕೈಗೊಳ್ಳಲಾಗುವುದು

235(116) ಶ್ರೀ ಹೆಚ್ ಎಸ್ ಶಿವಶಂಕರ ರೆಡ್ಡಿ (ಗೌರಿ ಬಿದನೂರು)

ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

1) ಕೋಲಾರ ಜಿಲ್ಲೆಯ ಸಾಲ ಮನ್ನಾ ಯೋಜನೆಯಡಿಯಲ್ಲಿ ಪ್ರಯೋಜನ ಪಡೆದವರ ಸಂಖ್ಯೆ ಎಷ್ಟು?

2) ಈ ಪೈಕಿ ಸಾಲ ಮನ್ನಾ ಮಾಡಲಾದ ಪ್ರಮಾಣವೆಷ್ಟು? (ತಾಲ್ಲೂಕುವಾರು ವಿವರ ನೀಡುವುದು)

ಶ್ರೀ ಜಿ ಟಿ ದೇವೇಗೌಡ

1) ಕೋಲಾರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನಲ್ಲಿ 1985 ರೈತರು ಸಾಲ ಮನ್ನಾ ಯೋಜನೆಯಡಿಯಲ್ಲಿ ಪ್ರಯೋಜನ ಪಡೆದಿರುತ್ತಾರೆ

ಆ ಪೈಕಿ ರೂ 405 ಲಕ್ಷಗಳ ಸಾಲ ಮನ್ನಾ ಮಾಡಲಾಗಿದೆ ತಾಲ್ಲೂಕುವಾರು ವಿವರ ಈ ಕೆಳಕಂಡಂತಿರುತ್ತದೆ